ಅಲ್ಲಿಂದೆದ್ದು ಬಂದು ಬಾಯಲ್ಲಿ ನೀರೂರಿಸುವ ಮಾವಿನಹಣ್ಣು ತಿನ್ನಿ" ಎಂದು ಉಪದೇಶಿಸಿದ್ದಾರೆ. ಭಕ್ತರು ಮಾವಿನಹಣ್ಣು ತಿನ್ನಲಾರದ, ತಿನ್ನಿಸಲಾರದ ಗುರುಗಳಿಂದ ದೂರವಿದ್ದುಬಿಡಬೇಕು. ಜಿಜ್ಞಾಸುಗಳ ಕಣ್ಣುತೆರೆಯುವಂತೆ ಮಾಡುವ ಸದ್ಗುರುವನ್ನು ಪಡೆದುಕೊಳ್ಳಬೇಕು.

ಗುರುವಿಗೆ ಕೆಲವು ಲಕ್ಷಣಗಳಿರುವಂತೆ, ಶಿಷ್ಯನಾಗಲು ಬಯಸುವವನಿಗೂ ಗುರುವಿನಲ್ಲಿ ಶ್ರದ್ಧೆ, ಭಕ್ತಿ, ಗೌರವ ಮುಂತಾದ ಸಲ್ಲಕ್ಷಣಗಳಿರಬೇಕು ಎಂಬುದರತ್ತಲೂ ಈ ಕಥಾಸಂದರ್ಭದಲ್ಲಿ ವಿವೇಕಾನಂದರು ಜಿಜ್ಞಾಸುಗಳ ಗಮನಸೆಳೆದಿದ್ದಾರೆ. ಇಲ್ಲದಿದ್ದರೆ ಯಾವುದೇ ಆಧ್ಯಾತ್ಮಿಕ ವಿಕಾಸವೂ ಆಗುವುದಿಲ್ಲ ಎಂದು ಎಚ್ಚರಿಸಿದ್ದಾರೆ. ಹಣ್ಣು ತಿನ್ನುವುದಕ್ಕೂ ಸಿದ್ಧತೆ ಬೇಕಲ್ಲ!

ಈ ದೃಷ್ಟಾಂತ ಕಥೆಗೆ ಪರಮಹಂಸರೇ ಮೂಲಪುರುಷರಾಗಿದ್ದಾರೆ. "ಭಗವಾನ್ ಶ್ರೀರಾಮಕೃಷ್ಣರು ಒಂದು ಕಥೆಯನ್ನು ಹೇಳುತ್ತಿದ್ದರು" ಎಂದು ಹೇಳಿಯೇ ವಿವೇಕಾನಂದರು ಈ ಮೇಲಿನ ಕಥೆಯನ್ನು ಪ್ರಾರಂಭಿಸಿದ್ದಾರೆ. ಪರಮಹಂಸರು ಮೂರುಬಾರಿ ಈ ದೃಷ್ಟಾಂತ ಕಥೆಯನ್ನು ನಿರೂಪಿಸಿರುವುದು ದಾಖಲಾಗಿದೆ.

ಪರಮಹಂಸರ ದೇಹಾರೋಗ್ಯವನ್ನು ವರದಿಮಾಡಲು ಮಾಸ್ಟರ್ ಮಹಾಶಯರು ವೈದ್ಯನಾದ ಸರ್ಕಾರ್ ಎಂಬಾತನ ಮನೆಗೆ ಹೋದರು. ಆಗ ಸರ್ಕಾರನು ಮಾಸ್ಟರನ್ನು ಕುರಿತು, "ಗೋತೆ ಎನ್ನುವವನು ತನ್ನ ಸ್ಥೂಲಶರೀರದಿಂದ ಸೂಕ್ಷ್ಮಶರೀರವು ಹೊರಕ್ಕೆ ಬಂದುದನ್ನು ತಾನೇ ಕಣ್ಣಾರೆ ಕಂಡಿದ್ದಾನಂತೆ. ಇದು ಆಶ್ಚರ್ಯಕರವಾದ ವಿಚಾರವಲ್ಲವೇ" ಎಂದು ಹೇಳಿದನು. ಅದನ್ನು ಮಾಸ್ಟರ್ ಮಹಾಶಯರು ಅಚ್ಚರಿಪಟ್ಟು ಸ್ವೀಕರಿಸಲಿಲ್ಲ. ಅವರು ವೈದ್ಯನನ್ನು ಕುರಿತು, "ಪರಮಹಂಸರು ಹೇಳುವಹಾಗೆ ಈ ವಿಧದ ಮಾತುಗಳಿಂದ ನಮಗಾವ ಪ್ರಯೋಜನವೂ ಆಗುವುದಿಲ್ಲ. ಭಗವಂತನ ಪಾದಕಮಲಗಳಲ್ಲಿ ಭಕ್ತಿ ಬೆಳೆಸಿಕೊಳ್ಳುವುದಕ್ಕೆಂದು ನಾವು ಈ ಜಗತ್ತಿಗೆ ಹುಟ್ಟಿಬಂದಿದ್ದೇವೆ. ಮಾವಿನಹಣ್ಣು ತಿನ್ನಬೇಕೆಂದು ತೋಟಕ್ಕೆ ಹೊಕ್ಕವನ ಕಥೆಯನ್ನು ಅವರು ಹೇಳುತ್ತಿರುತ್ತಾರೆ" ಎಂದು ಮಾಸ್ಟರ್ ಆ ಕಥೆಯನ್ನು ಹೀಗೆ ನಿರೂಪಿಸಿದ್ದಾನೆ:

ತೋಟವನ್ನು ಹೊಕ್ಕ ಮನುಷ್ಯನು ಹಣ್ಣುತಿನ್ನದೆ ಎಷ್ಟು ಮರಗಳಿವೆ, ಎಷ್ಟು ರೆಂಬೆಗಳಿವೆ, ಎಷ್ಟು ಎಲೆಗಳಿವೆ ಎಂಬುದನ್ನೆಲ್ಲ ಎಣಿಎಣಿಸಿ ಬರೆದುಕೊಳ್ಳುತ್ತಿದ್ದನು. ಅದನ್ನು ಕಂಡ ಆ ತೋಟದ ಮಾಲಿಯು, " ಇದೇನಿದು ಸ್ವಾಮಿ, ನೀವು ಮಾಡುತ್ತಿರುವ ಕೆಲಸ. ನೀವು ಇಲ್ಲಿಗೆ ಬಂದುದಾದರೂ ಏಕೆ?" ಎಂದು ಪ್ರಶ್ನಿಸಿದನು. ಆಗ ಆತನು, "ನಾನು ಮಾವಿನಹಣ್ಣು ತಿನ್ನಲೆಂದೇ ಬಂದೆ, ಆದರೆ ಅದನ್ನು ಮರೆತು ಎಲೆಗಳನ್ನು ಎಣಿಸುವುದರಲ್ಲಿಯೇ ಮುಳುಗಿಬಿಟ್ಟೆ" ಎಂದನು. ಆಗ ಮಾಲಿಯು, "ಮಾವಿನಹಣ್ಣು ತಿನ್ನುವುದೇ ನಿಮ್ಮ ಉದ್ದೇಶವಾದರೆ ತಿಂದು ಆನಂದಪಡಿ. ಮರ, ಕೊಂಬೆ, ಎಲೆ, ಹಣ್ಣು ಎಷ್ಟೆಷ್ಟಿವೆ ಎಂಬುದನ್ನು ಕಂಡುಹಿಡಿಯುವುದರಿಂದ ನಿಮಗೆ ಯಾವ ಫಲವೂ ದೊರಕುವುದಿಲ್ಲ" ಎಂದು ಹೇಳಿದನು.

ಈ ಕಥೆಯನ್ನು ಮಾಸ್ಟರ್‌ಮಹಾಶಯರಿಂದ ಕೇಳಿಸಿಕೊಂಡ ವೈದ್ಯನು "ಓಹೋ, ಪರಮಹಂಸರು ಸಾರವನ್ನೆಲ್ಲ ಹಿಂಡಿಕೊಂಡಿದ್ದಾರೆ" ಎಂದು ಸಂಭ್ರಮದಿಂದ ಉದ್ಗರಿಸಿದನು.

ಇದೇ ಕಥಾವೃತ್ತಾಂತವು ಈಶ್ವರಚಂದ್ರ ವಿದ್ಯಾಸಾಗರರ ನೆನಪಿನಲ್ಲಿಯೂ ಬಂದಿದೆ. ಒಮ್ಮೆ ವಿದ್ಯಾಸಾಗರರು ಮಾಸ್ಟರ್ ಮಹಾಶಯರೊಂದಿಗೆ ಮಾತನಾಡುತ್ತ, "ಆ ಲೂಟಿಕೋರನಾದ ಚಂಗೇಸ್‌ಖಾನನು ಲಕ್ಷಮಂದಿ ನಿರಪರಾಧಿಗಳ ತಲೆಗಳನ್ನು ಕಚ್‌ಕಚ್ ಎಂದು ಕ್ರೌರ್ಯದಿಂದ ಕೊಚ್ಚಿಹಾಕಿದನು. ಈ ಕ್ರೂರ ಕೃತ್ಯವನ್ನು ತಡೆಯಲು ಭಗವಂತನು ಯಾವ ಪ್ರಯತ್ನವನ್ನೂ ಮಾಡಲೇಯಿಲ್ಲ" ಎಂದು ಸಿಟ್ಟಿನಿಂದಲೇ ದೇವರನ್ನು ದೂರಿದನು. ಅದನ್ನು ಮಾಸ್ಟರ್‌ಮಹಾಶಯರು ಯಾವಾಗಲೋ ಪರಮಹಂಸರ ಮುಂದೆಯೂ ಹೇಳಿದರು. ಪರಮಹಂಸರ ಪ್ರತಿಕ್ರಿಯೆ ಏನಿರುತ್ತದೆ ಎಂದು ಮಾಸ್ಟರ್ ಎದುರುನೋಡುತ್ತಿದ್ದರು. ಪರಮಹಂಸರಾದರೋ, "ಭಗವಂತನು ಸೃಷ್ಟಿಯ ಸಂರಕ್ಷಣೆಯ ಕಾರ್ಯವನ್ನು ಮಾಡುವುದಲ್ಲದೆ, ಅದರ ಸಂಹಾರಕಾರ್ಯವನ್ನೂ ಮಾಡುತ್ತಾನೆ. ಅವನು ಯಾವ ಉದ್ದೇಶದಿಂದ ಏನೇನು ಮಾಡುತ್ತಾನೆ ಎಂಬುದನ್ನು ನಾವು ಅರಿತುಕೊಳ್ಳುವುದು ಸಾಧ್ಯವಿಲ್ಲ. ಅದನ್ನು ಅರಿತುಕೊಳ್ಳಬೇಕಾಗಿಯೂ ಇಲ್ಲ. ದಯಮಾಡಿ ನಿನ್ನ ಪಾದಪದ್ಮಗಳಲ್ಲಿ ನನಗೆ ಭಕ್ತಿನೀಡು ಎಂದು ನಾನು ಜಗನ್ಮಾತೆಯನ್ನು ಬೇಡುತ್ತೇನೆ. ನಾನು ಮಾವಿನಹಣ್ಣು ತಿನ್ನಲೆಂದೇ ತೋಟಕ್ಕೆ ಬಂದಿದ್ದೇನೆ. ಮರ, ಕೊಂಬೆ, ಎಲೆಗಳ ಲೆಕ್ಕಾಚಾರ ನನಗೆ ಬೇಕಾಗಿಲ್ಲ" ಎಂದು ಪ್ರತಿಕ್ರಿಯೆ ನೀಡಿದರು.

ಮತ್ತೊಮ್ಮೆ ಮಾಸ್ಟರ್‌ಮಹಾಶಯರು ತಮ್ಮ ಬಾಲ್ಯದ ಸಹಪಾಠಿಯಾದ ಶ್ರೀಶ ಎಂಬ ವಿದ್ವಾಂಸನಾದ ವಕೀಲನನ್ನು ಪರಮಹಂಸರಿಗೆ ಪರಿಚಯಿಸಿದರು. ಆಗ ಪರಮಹಂಸರು ಶ್ರೀಶನನ್ನು ಕುರಿತು, 'ಇವನೇನು ಹೇಳುತ್ತಾನೆ, ನೋಡೋಣ' ಎಂಬ ಭಾವನೆಯಿಂದಲೋ ಏನೋ – "ಭಗವಂತನ ವಿಷಯದಲ್ಲಿ ನಿನ್ನ ಅಭಿಪ್ರಾಯವೇನಪ್ಪಾ?" ಎಂದು ಪ್ರಶ್ನಿಸಿದರು. ಅದಕ್ಕೆ ಶ್ರೀಶನು ತನ್ನ ವಿದ್ವತ್ತನ್ನು ಪ್ರದರ್ಶಿಸುವ ದನಿಯಲ್ಲಿ, "ಭಗವಂತನಿದ್ದಾನೆ, ಅವನೇ ಎಲ್ಲವನ್ನೂ ಮಾಡುತ್ತಾನೆ. ಅವನು ಅನಂತನಾಗಿದ್ದಾನೆ. ಆದರೆ ನಾವು ಅವನಿಗೆ ಆರೋಪಿಸುವ ಗುಣಗಳು ಮಾತ್ರ ಸರಿಯಾದುವುಗಳಲ್ಲ" ಎಂದನು. ಈ ಉತ್ತರದಿಂದ ತೃಪ್ತರಾಗದೆ ಪರಮಹಂಸರು ಮಾವಿನಹಣ್ಣಿನ ದೃಷ್ಟಾಂತವನ್ನು ಕೊಟ್ಟರು. ಅದರೊಂದಿಗೆ ಮದ್ಯದ ದೃಷ್ಟಾಂತವನ್ನೂ ಜೋಡಿಸಿದರು.

"ತೋಟದಲ್ಲಿ ಎಷ್ಟು ಮರಗಳಿವೆ, ಎಷ್ಟು ಕೊಂಬೆಗಳಿವೆ ಎಂಬುದರ ಲೆಕ್ಕಾಚಾರ ನಿನಗೇಕೆ ಬೇಕು? ನೀನು ತೋಟಕ್ಕೆ ಬಂದಿರುವುದು ಮಾವಿನಹಣ್ಣು ತಿನ್ನುವುದಕ್ಕೆ. ತಿಂದು ಆನಂದಪಡು. ಭಗವಂತನಲ್ಲಿ ಭಕ್ತಿ, ಪ್ರೇಮಗಳನ್ನು ಗಳಿಸಿಕೊಳ್ಳುವುದೇ ಮಾನವಜನ್ಮದ ಉದ್ದೇಶ. ಅದನ್ನು ಪಡೆದುಕೊಳ್ಳಲು ಆನಂದದಿಂದಿರು. ನೀನು ಬಂದುದು ಮದ್ಯ ಕುಡಿಯುವುದಕ್ಕೆ. ಮದ್ಯದ ಅಂಗಡಿಯಲ್ಲಿ ಎಷ್ಟು ಪೀಪಾಯಿ ಮದ್ಯ ಇದೆ ಎಂಬುದನ್ನು ತಿಳಿದುಕೊಳ್ಳುವುದರಿಂದ ನಿನಗೇನೂ ಪ್ರಯೋಜನವಾಗುವುದಿಲ್ಲ. ನಿನಗೆ ಒಂದು ಲೋಟವೇ ಸಾಕು. ಭಗವಂತನ ಅನಂತ ಗುಣಗಳ ಸಂಬಂಧವಾಗಿ ಅರಿತುಕೊಳ್ಳುವುದರ ಆವಶ್ಯಕತೆಯಾದರೂ ಏನಿದೆ? ಆತನ ಗುಣಗಳು ಏನೇನು, ಎಷ್ಟೆಷ್ಟಿವೆ ಎಂಬುದನ್ನು ಅರಿತುಕೊಳ್ಳಲು ಒಂದು ಕೋಟಿವರ್ಷ ಪ್ರಯತ್ನಪಟ್ಟರೂ ಒಂದು ಕಿಂಚಿತ್ತನ್ನೂ ನಾವು ಅರಿತುಕೊಳ್ಳಲಾರೆವು" ಎಂದು ಉಪದೇಶಿಸಿದರು.


ಒಂದೇ ದೃಷ್ಟಾಂತಕಥೆಯನ್ನು ಪರಮಹಂಸರು ಹೇಗೆ ವಿವಿಧ ತತ್ತ್ವಗಳ ಆಯಾಮಗಳಲ್ಲಿ ನಿರೂಪಿಸಿದ್ದಾರೆಂಬುದನ್ನು ನೋಡಿದರೆ ಸಂತೋಷವಾಗುತ್ತದೆ. ವಿವೇಕಾನಂದರು ಆವುಗಳನ್ನೆಲ್ಲ ಮೀರಿ, ಸದ್ಗುರುವಿನ ವಿಶಿಷ್ಟ ಲಕ್ಷಣವೊಂದನ್ನು ಸ್ಫುಟಗೊಳಿಸಲು ಈ ದೃಷ್ಟಾಂತ ಕಥೆಯನ್ನು ಮತ್ತಷ್ಟು ಸ್ವಾರಸ್ಯಭರಿತವಾಗುವಂತೆ ಬಳಸಿಕೊಂಡಿರುವುದು, ಬೆಳೆಸಿಕೊಂಡಿರುವುದು ಮೆಚ್ಚುವಂತಿದೆ.

⌘


# ನೀಲಕಂಠ ದೀಕ್ಷಿತರು

ಕಥೆ : ರೇವತಿ ಚಿತ್ರ : ಶಂಕರ್

**1** ನೀಲಕಂಠ ದೀಕ್ಷಿತರು ಜಗನ್ಮಾತೆಯ ಬಹು ದೊಡ್ಡ ಭಕ್ತರು. ಅವರು ಒಬ್ಬ ಜ್ಞಾನಿ ಮತ್ತು ಕವಿ ಕೂಡ. ಅವರು ಅಖಿಲಾಂಡೇಶ್ವರಿಯ ದೇವಸ್ಥಾನದಲ್ಲಿ ಜಪಸಾಧನೆ ಮಾಡುತ್ತಿದ್ದರು. ಆ ಸಮಯದಲ್ಲಿ, ರಾಜನಾದ ತಿರುಮಲ ನಾಯಕನು ಅಲ್ಲಿಗೆ ಬಂದನು.





**2**




**3** ದೀಕ್ಷಿತರು ದಕ್ಷಿಣಾಮೂರ್ತಿಯ ವಿಗ್ರಹದ ಮುಂದೆ ಧ್ಯಾನಸ್ಥರಾಗಿ ಕುಳಿತುಕೊಂಡಿದ್ದರು. ರಾಜಾ ತಿರುಮಲ ನಾಯಕನು ಅವರಿಗಾಗಿ ಕಾಯ್ದು ನಿಂತಿದ್ದ.




**4** ಜಪವನ್ನು ಮುಗಿಸಿದ ನಂತರ ದೀಕ್ಷಿತರು ರಾಜ ನಿಂತಿರುವುದನ್ನು ಕಂಡು, ಒಡನೆ ಎದ್ದುನಿಂತರು.





ದೀಕ್ಷಿತರು ಈ ಆಹ್ವಾನವನ್ನು ಒಪ್ಪಿಕೊಂಡರು. ರಾಜನ ಸಲಹೆಗಾರರಾಗಿ ಮತ್ತು ರಾಜ್ಯದ ಮಂತ್ರಿಯಾಗಿ ಕಾರ್ಯ ನಿರ್ವಹಿಸಲಾರಂಭಿಸಿದರು.

**5** ಒಂದು ದಿನ ತನ್ನ ಮತ್ತು ತನ್ನ ರಾಣಿಯ ವಿಗ್ರಹಗಳನ್ನು, ಲಕ್ಷ್ಮೀದೇವಿಯ ದೇವಸ್ಥಾನದ ದ್ವಾರದಲ್ಲಿ ಪ್ರತಿಷ್ಠಾಪಿಸಬೇಕೆಂದು ರಾಜನು ಆದೇಶವಿತ್ತನು. ಮಂತ್ರಿಗಳು ಈ ಕಾರ್ಯದ ಮೇಲ್ವಿಚಾರಣೆಗಾಗಿ ಅಲ್ಲಿಗೆ ಹೋದರು.




**7** ದೀಕ್ಷಿತರು ತಮ್ಮ ಕಣ್ಣುಗಳನ್ನು ಮುಚ್ಚಿ, ಜಗನ್ಮಾತೆಯನ್ನು ಧ್ಯಾನಿಸಿದರು.




8
ರಾಣಿಯ ಮೂರ್ತಿಯನ್ನು ವೀಕ್ಷಿಸಿದ ರಾಜನಿಗೆ ಕೋಪ ಮತ್ತು ಸಂದೇಹ ಉಕ್ಕಿಬಂತು.
ರಾಣಿಯ ತೊಡೆಯಲ್ಲಿರುವ ಗಡ್ಡೆಯ ವಿಚಾರ ಶಿಲ್ಪಿಗೆ ಹೇಗೆ ತಾನೇ ಗೊತ್ತಾಯಿತು?
ರಾಜನ ಸಂದೇಹವನ್ನು ಅರಿತ ಶಿಲ್ಪಿಯು, ಮಂತ್ರಿಗಳ ಆದೇಶದಂತೆ ತಾನು ಕೆಲಸ ಮಾಡಿದ್ದಾಗಿ ಅರಿಕೆ ಮಾಡಿಕೊಂಡನು.
9
ಹಾಗಾದರೆ ಮಂತ್ರಿಯೇ ಅಪರಾಧಿಯೇನು? ಸೈನ್ಯಾಧಿಪತಿ, ಒಡನೇ ಹೋಗು. ಮಂತ್ರಿಯ ಎರಡೂ ಕಣ್ಣುಗಳನ್ನು ಕಿತ್ತುಹಾಕು. ಇದು ಬೇರೆಯವರಿಗೆ ಒಂದು ಪಾಠವಾಗಲಿ. ಭವಿಷ್ಯದಲ್ಲಿ ಈ ಬಗೆಯ ಅಪರಾಧ ಯಾರೂ ಎಸಗದಂತಾಗಲಿ.
10
ಸ್ವಾಮಿ, ಸೈನಿಕರು ನಿಮ್ಮನ್ನು ಹುಡುಕುತ್ತ ಬಂದಿದ್ದಾರೆ.
ಸೈನಿಕರು ಏಕೆ ತಾನೇ ಬಂದಿರಬಹುದು?!
ಮಹಾತ್ಮರಾದ ನೀಲಕಂಠ ದೀಕ್ಷಿತರು, ರಾಜನು ಈ ಬಗೆಯ ಆದೇಶವನ್ನು ಏಕೆ ನೀಡಿದ್ದಾನೆಂದು ಜ್ಞಾನದೃಷ್ಟಿಯಿಂದ ಅರಿತುಕೊಂಡರು.
11
ಅಮ್ಮಾ, ನನ್ನ ಇಡೀ ಜೀವನವೇ ನಿನ್ನ ಪಾದಪದ್ಮಗಳಿಗೆ ಅರ್ಪಿತವಾಗಿರಬೇಕಾಗಿತ್ತು ತಾಯೇ, ರಾಜನು ಒತ್ತಾಯಿಸಿದನೆಂದು ಮಂತ್ರಿಪದವಿಗೆ ಒಪ್ಪಿಕೊಂಡೆ. ಈಗ ಈ ತಪ್ಪಿಗಾಗಿ ಸರಿಯಾದ ಶಿಕ್ಷೆಯನ್ನು ಅನುಭವಿಸಲಿದ್ದೇನೆ. ಬೇರೆ ಯಾರಾದರೂ ಏಕೆ ತಾನೇ ನನಗೆ ಶಿಕ್ಷೆ ಕೊಡಬೇಕು? ನನ್ನನ್ನು ನಾನೇ ಶಿಕ್ಷಿಸಿಕೊಳ್ಳುತ್ತೇನೆ.
12
ತಾವು ಮಾಡುತ್ತಿದ್ದ ಪೂಜೆಯನ್ನು ಮುಗಿಸಿದ ದೀಕ್ಷಿತರು, ಉರಿಯುತ್ತಿರುವ ಕರ್ಪೂರವನ್ನು ತಮ್ಮ ಕಣ್ಣಿಗೆ ಲೇಪಿಸಿಕೊಂಡರು. ಅವರ ಕಣ್ಣುಗಳು ಕುರುಡಾದವು.
ತಾಯಿ ಮೀನಾಕ್ಷಿ, ನನ್ನ ಅಪರಾಧಕ್ಕೆ ನಾನೇ ಶಿಕ್ಷೆ ಕೊಟ್ಟುಕೊಂಡೆ. ಇಂದಿನಿಂದ ನನ್ನ ಅಂತರಂಗದ ಕಣ್ಣು ಮಾತ್ರವೇ ನಿನ್ನ ದಿವ್ಯರೂಪವನ್ನು ನೋಡಬಲ್ಲುದು.